doc-584
T.P-2

Reg No B G 155 ಶ್ರೀ 10 11 72

In The State First Golden Jubilee Celebrated Paper 'Satyavadi' daily, Mysore 4

ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸಂವೇರಿಸಿದ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಅರಮನೆ ಭರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ನ್ಯೆ

ಭಾಷಾಂಧತೆ ಬಗೆಗೆ ಶ್ರೀ ದೇವರಾಜ ಅರಸ್ ಎಚ್ಚರಿಕೆ

ಅದ್ಭುತ ಕಾರ್ಯ

ಕೊಚ್ಚಿ — ಮರದ ಮೇಲೆ ಪೂರ್ತಿ ರಾಮಾಯಣ ಕಥೆಯನ್ನು ಕುಶಲ ಕೈಗಾರಿಕಾ ಸಂಸ್ಥೆಯಲ್ಲಿ ಉದ್ಘಾಟಿಸಲಾಯಿತು – 130 ಅಡಿ ಉದ್ದದ ಮರದಲ್ಲಿ 150 ಘಟನೆಯನ್ನು ಕೆತ್ತಲಾಗಿದೆ – ಇದನ್ನು ತಯಾರಿಸಲು ಶಿಲ್ಪಿಗೆ 820 ಗಂಟೆ ಕಾಲ ಹಿಡಿಯಿತು

○

ಮುಲ್ಕಿ ಸಮಸ್ಯೆ

ಹೈದರಾಬಾದು– ಆಂಧ್ರಪ್ರದೇಶವನ್ನು ತಳಮಳಿಸುತ್ತಿರುವ ಮುಲ್ಕಿ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲು ಮುಖ್ಯ ಮಂತ್ರಿ ಶ್ರೀ ನರಸಿಂಹರಾವ್‌ರಿಗೆ ಎಲ್ಲ ಮಂತ್ರಿಗಳೂ ಅಧಿಕಾರ ಕೊಟ್ಟರು

○

ಸೈಕಲ್ ರಪ್ತು

ನವದೆಹಲಿ — ಅಮೇರಿಕಕ್ಕೆ ಬೈಸಿಕಲ್ ಸರಬರಾಜು ಮಾಡಲು ರೂ. 1 ಕೋಟಿ ಮೌಲ್ಯದ ರಫ್ತು ಆರ್ಡರು ಸಿಕ್ಕಿದೆ.

★

ಭಾಷಾ ಗಲಭೆ

ಶಿಲಾಂಗು – ಭಾಷಾ ಗಲಭೆಗಳು ಮತ್ತೆ ಚಿಗುರಿ, ಕಲಿಯಬೂರು ಪಟ್ಟಣದಲ್ಲಿ ಸೇರಿದ ಭೀಕರ ಗಲಭೆಗಾರರನ್ನು ಚದುರಿಸಲು ಪೋಲೀಸರು ಗೋಲೀಬಾರ್ ಮಾಡಿದರು ; ಒಬ್ಬ ಸತ್ತು ಇಬ್ಬರಿಗೆ ಗುಂಡಿನ ಗಾಯವಾಯಿತು.

○

ಒಳ್ಳೇ ಯೋಜನೆ

ಬೆಂಗಳೂರು — ಬಸ್‌ಗಳ ಉಪಯೋಗ ಸಂಬಂಧದ ವಿಚಾರದಲ್ಲಿ ಮಹಾರಾಷ್ಟ್ರ ದಲ್ಲಿರುವಂತೆ ಸಂಶೋಧನಾ ಕೇಂದ್ರ ಸ್ಥಾಪಿಸಲು ಸಾರಿಗೆ ಸಂಸ್ಥೆ ಯೋಜಿಸಿರುವದೆಂದು ಸಾರಿಗೆ ಮಂತ್ರಿ ಶ್ರೀ ಅಜೀಜ್ ಸೇಟ್ ರವರು ಹೇಳಿದರು.

ಅಣ್ಣಾ ಡಿಎಂಕೆ ಮೆರವಣಿಗೆ

ಮದರಾಸು — ಅಣ್ಣಾ ಡಿಎಂಕೆ ಇಂದು ರಾಜ ಭವನಕ್ಕೆ ನಡೆಸುವ ಮೆರವಣಿಗೆ 8 ಮೈಲಿ ಮಾರ್ಗಗಳಲ್ಲಿದ್ದು ಕಡೆಯಲ್ಲಿ ಗೌರ್ನರರಲ್ಲಿ "ಪೋಲೀಸರ ದಬ್ಬಾಳಿಕೆ" ತಪ್ಪಿಸಲು ಮನವಿ ಮಾಡಲಾಗುವುದು – ಸರಕಾರ ಭಾರಿ ಬಂದೋಬಸ್ತು ಮಾಡಿದೆ – ನಗರ ಮತ್ತು ಸುತ್ತಮುತ್ತ ಮದ್ಯದಂಗಡಿಗಳು ಮುಚ್ಚಲ್ಪಟ್ಟಿರುವವು – ಅನೇಕ ವಿದ್ಯಾ ಸಂಸ್ಥೆಗಳು ರಜಾ ಆಚರಿಸುತ್ತಿವೆ – ಕಮ್ಯುನಿಸ್ಟು ಪಾರ್ಟಿ, ಮುಸ್ಲಿಂ ಲೀಗು, ಸೋಷಲಿಸ್ಟು ಮತ್ತು ರಿಪಬ್ಲಿಕ್ ಪಾರ್ಟಿ ಮೆರವಣಿಗೆಯಲ್ಲಿ ಭಾಗವಹಿಸಲಿವೆ – ಮೆರವಣಿಗೆಯನ್ನು ರಾಜಭವನಕ್ಕೆ ಒಂದು ಮೈಲಿ ದೂರದಲ್ಲಿ ತಡೆಯಲಾಗುವುದೆಂದೂ ಆದರೆ ಅದರ ಪ್ರತಿನಿಧಿಗಳು ಗೌರ್ನರರನ್ನು ಕಾಣಲು ಅವಕಾಶ ಕೊಡಲಾಗುವದೆಂದೂ ಪೋಲೀಸು ಕಮಿಷನರರು ಹೇಳಿರುವರು.

– 2 ಸ್ಥಾನಗಳಿಗೆ 12 ಸ್ಪರ್ಧಿಗಳು

ಹುಬ್ಬಳ್ಳಿ — ಮುನಿಸಿಪಲ್ ಕಾರ್ಪೊರೇಷನ್ನಿನ ಭುಜಬಲ್ಗಾವಣೆಯಲ್ಲಿ 2 ಸ್ಥಾನಗಳಿಗೆ 12 ಮಂದಿ ಸ್ಪರ್ಧಿಸಿರುವರು.

●

ವಿಗ್ರಹಗಳು ಸಿಕ್ಕಿದವು

ಬೆಂಗಳ್ಳೂರು — ಹಿಂದೂಸ್ಥಾನ ವಿಮಾನ ಸಂಸ್ಥೆ ಹತ್ತಿರ ಪೋಲೀಸರು ಇಬ್ಬರಿಂದ 4 ವಿಗ್ರಹಗಳನ್ನು (ರಾಮ, ಸೀತೆ, ಆಂಜನೇಯ, ಲಕ್ಷ್ಮಿ) ವಶಪಡಿಸಿಕೊಂಡು ಅವರನ್ನು ದಸ್ತಗಿರಿ ಮಾಡಿದರು.

★

ಕೇಂದ್ರದ ಮಾಸಲು ಪಡೆ

ಕಡಪ– ಮುಲ್ಕಿ ನಿಬಂಧನೆ ಬಗ್ಗೆ ಚಳವಳಿ ತೀವ್ರಗೊಳ್ಳುತ್ತಿದ್ದು ಕೇಂದ್ರದ ಮಾಸಲು ಪಡೆ ಕರೆತರಿಸಲಾಗಿದೆ

ಮನೆ ಅಳತೆಗೂ ಪರಿಮಿತಿ

ಬೆಂಗಳೂರು — ಭೂಮಿ ಬೆಲೆ ಏರಿಕೆ ತಡೆಗಟ್ಟಲು, ದೇಶದಲ್ಲಿ 5 ಮಂದಿ ಸದಸ್ಯರ ಕುಟುಂಬಕ್ಕೆ 750 ಚದುರಡಿ ಮನೆ ಪರಿಮಿತಿಯನ್ನು ರೈಲ್ವೇ ಮಂತ್ರಿ ಶ್ರೀ ಟಿ ಎ ಪೈರವರು ಸಲಹೆ ಮಾಡಿದ್ದಾರೆ.

★

ಸಕ್ಕರೆ ಬೆಲೆ ಏರಿಕೆ

ನವದೆಹಲಿ — ಅಕ್ಟೋಬರು 1 ರಿಂದ ಪ್ರಾರಂಭವಾಗುವ ಪ್ರಸ್ತುತ ಕಾಲಕ್ಕೆ ಸಕ್ಕರೆ ಬೆಲೆ ಕಿಲೋಗೆ 20 ಪೈಸೆ ಹೆಚ್ಚಿಸಲಾಗುವುದು.

★

ತಿಂಡಿ ಬೆಲೆ ತಗ್ಗಿಸಲು

ಶಿಕಾರಿಪುರ — ಹೋಟಲುಗಳಲ್ಲಿ ತಿಂಡಿ ಬೆಲೆ ಏರಿಕೆ ಪ್ರತಿಭಟಿಸಿ ಊರಿನಲ್ಲಿ ಭಾರಿ ಮೆರವಣಿಗೆ ನಡೆಸಲಾಯಿತು.

★

ಪತ್ರಿಕೆ ರಾಷ್ಟ್ರೀಕರಣ

ಕೊಲಂಬೊ — ಲೇಕ್ ಹೌಸ್ ಪ್ರಕಾಶನ ಸಂಸ್ಥೆಯನ್ನು ಸರಕಾರ ವಹಿಸಿಕೊಳ್ಳುವ ವಿಚಾರವನ್ನು ಮುಂದಕ್ಕೆ ಹಾಕಲಾಗಿದೆ ; ಈ ಸಂಸ್ಥೆ 5 ಪತ್ರಿಕೆಗಳನ್ನು ಪ್ರಕಟಿಸುತ್ತಿದೆ – ಪ್ರೆಸ್ ಕೌನ್ಸಿಲ್ ಮಸೂದೆಗೆ ಪ್ರತಿಭಟನೆ ಹೆಚ್ಚಾಗಿದೆ – ದೇಶದ ಹಲವು ಕಡೆಗಳಿಂದ ಬೌದ್ಧ ಸನ್ಯಾಸಿಗಳು ಈಟರ ಗಾಮುವಿನಲ್ಲಿಯ ವಿಷ್ಣು ಮತ್ತು ಮುರ್ಗ ದೇವಾಲಯಕ್ಕೆ ಬಂದು ಮಸೂದೆ ವಿರುದ್ಧ ಪ್ರಾರ್ಥನೆ ಸಲ್ಲಿಸುತ್ತಿರುವರೆಂದರು.

○

ಮರಣದಂಡನೆ ಇರಲಿ !

ಲಾಸ್ ಏಂಜಲ್ಸ್ — ಜನಮತ ಸಂಗ್ರಹಣೆಯಲ್ಲಿ ಕ್ಯಾಲಿಫೋರ್ನಿಯಾದವರು ಮತ್ತೆ ಮರಣದಂಡನೆಯನ್ನು ಜಾರಿಗೆ ತರಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾ

ಹಂಚಿಕೆಯಲ್ಲಿ ಅನ್ಯಾಯ ಪ್ರತಿಟನೆ

ಹುಬ್ಬಳ್ಳಿ — ನ್ಯಾಯಬೆಲೆ ಅಂಗಡಿಗಳ ಮೂಲಕ ಸಕ್ಕರೆ ಮತ್ತು ಆಹಾರಧಾನ್ಯಗಳಲ್ಲಿನ ಅನ್ಯಾಯ ರೀತಿಯ ಹಂಚಿಕೆಯನ್ನು ಪ್ರತಿಭಟಿಸಿ ರಾತ್ರಿಯಲ್ಲಿ ಒಂದು ನ್ಯಾಯಬೆಲೆ ಅಂಗಡಿ ಮುಂದೆ ಹಳೇ ಕಾಂಗ್ರೆಸ್ಸಿನ ಕಾರ್ಯಕರ್ತ ಶ್ರೀ ಶಿವಪ್ಪ ನೆಲ್ಲೂರರವರು ಅನಿರ್ದಿಷ್ಟಕಾಲದ ಉಪವಾಸ ಪ್ರಾರಂಭಿಸಿದ್ದಾರೆ.

★

ಭಾಷಾಂಧತೆ

ಬೆಂಗಳೂರು — ಭಾಷಾಂಧತೆ ಬೆಳವಣಿಗೆ ಬಗ್ಗೆ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್‌ರವರು ಎಚ್ಚರಿಕೆ ನೀಡಿರುವರುವರು –ಇದು ದೇಶದ ಐಕ್ಯತೆ ಮತ್ತು ಪ್ರಗತಿಗೆ ಅಪಾಯಕಾರಿ ಎಂದು ರಾಮರಾಜಪೇಟೆಯ ರಾಜ್ಯೋತ್ಸವ ಸಮಾರಂಭವನ್ನು ಉದ್ಘಾಟಿಸುತ್ತಾ ಹೇಳಿದರು.

★

ಕಾನ್ವೊಕೇಷನ್

ಮೈಸೂರು — ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಕಾನ್ವೊಕೇಷನ್ ಡಿಸೆಂಬರ್ ಕಡೇ ವಾರದಲ್ಲಿ ನಡೆಯಲಿದೆ.

★

ಕಾರ್ಪೊರೇಷನ್ ಆಗಲು

ಮೈಸೂರು — ಪೌರಸಭಾ ಕಾಂಗ್ರೆಸ್ ಪಾರ್ಟಿಯು, ಮೈಸೂರು ಪುರಸಭೆಯನ್ನು ಕಾರ್ಪೊರೇಷನ್ನಾಗಿ ಪರಿವರ್ತಿಸುವಂತೆ ಸರಕಾರವನ್ನು ವಿನಂತಿಸುವ ನಿರ್ಣಯವನ್ನು ಸರ್ವಾನುಮತದಿಂದ ಮಂಜೂರುಮಾಡಿತು.

○

ಬೆಲೆ ಹೆಚ್ಚಿತು

ನವದೆಹಲಿ — ವನಸ್ಪತಿ ಬೆಲೆಯನ್ನು ಸರಕಾರ ಕೆಜಿಗೆ 10 ಪೈಸೆ ಹೆಚ್ಚಿಸಿದೆ

★

ನೀರಿನ ಮಾರಾಟ

ಪಶ್ಚಿಮ ಜರ್ಮನಿಯಲ್ಲಿ ಬೇಸಿಗೆಯ ಬೇಗ ಮತ್ತು ಕುಡಿಯುವ ನೀರಿನ ಅಭಾವವನ್ನು ವ್ಯಾಪಾರಸ್ಥರು ಹಣಸಂಪಾದಿಸುವದಕ್ಕೆ ಬಳಸಿಕೊಂಡರು ; ದೊಡ್ಡ ಹಾಲು ಮಾರುವ ಕಂಪೆನಿಯೊಂದು ನೀರನ್ನು ಪ್ಲಾಲಿಥೀನ್ ಪ್ಯಾಕೆಟ್‌ಗಳಲ್ಲಿ ಮಾರಾಟ ಮಾಡಕೊಡಗಿತು ; ಬೆಲೆ ಒಂದು ಲಿಟ್ಟರ್‌ಗೆ 55 ಫೆನ್ನಿಂಗುಗಳು ; ಇನ್ನೊಂದು ಕಂಪೆನಿ ಬಾಟಲುಗಳಲ್ಲಿ ನೀರು ವ್ಯಾಪಾರ ಮಾಡಿತು ; ಅದರ ಬೆಲೆ ಕಾಫಿ, ಟೀ ಬೆಲೆಗಿಂತ ಹೆಚ್ಚಾಗಿತ್ತು ; 1 ಲಿಟರಿಗೆ 1 30 ಮಾರ್ಕ್ಸ್‌ಗಳಾಗಿದ್ದವು

ಸಮ್ಮೋಹನಾಸ್ತ್ರ

ಬ್ರೆಜಿಲ್ಲಿನಬಿಲಗ್ಜಾಂಡರ್ ಡಿ ಒಲ್ವ ಎರಡು ಸಾರಿ ಕಾರಾಗೃಹತಿಂದ ತಪ್ಪಿಸಿಕೊಂಡ ; ಎರಡು ಸಾರಿಯೂ ಅವನು ಸಮೋಹನಾಸ್ತ್ರ ಬಳಸಿ ಪಾರಾದ. ಮೊದಲು ಅವನು ತನ್ನ ಕೊಠಡಿ ಕಾಯುತ್ತಿದ್ದ ಕಾವಲುಗಾರನನ್ನು ಮರುಳುಗೊಳಿಸಿ, ನಂತರ ಹೊರಗಿನ ದಹರೆಯವನನ್ನು ಮರುಳುಮಾಡಿ ಪಾರಾದ

ವುಡ್‌ಲ್ಯಾಂಡ್ಸ್ ಅಮೋಘ 6 ನೇ ವಾರ

ರಾಜೇಂದ್ರ ಕುಮಾರ್ ಅರ್ಪಿಸುವ ರೋಸ್ ಮೂವೀಸ್‌ರವರ

ಹಿಂದಿ ಕಲರ್ ಅತ್ಯಮೋಘ ಚಿತ್ರ

ಜವಾನಿ ದಿವಾನಿ

ಪಾತ್ರ – ರಣಧೀರ್ ಕಪೂರ್, ಜಯಬಾಧುರಿ ದಿನ 3 ಪ್ರದರ್ಶನಗಳು

ಅಪೆರಾ 4 ನೇ ವಾರ

ಬಾಂಧವ್ಯ

ಪಾತ್ರ – ಅಶ್ವಥ್, ಗಂಗಾಧರ್, ರಾಜೇಶ್, ಬಿ. ವಿ. ರಾಧ, ಪಂಡರೀಬಾಯಿ,
ಸಂಧ್ಯಾರಾಣಿ, ಜಯಶ್ರೀ, ರಮಾದೇವಿ ದಿನ 3 ಪ್ರದರ್ಶನಗಳು

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವದು ಸುಳ್ಳಿನ' ಕಲ್ಪನೆ
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ

—ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಚೊಚ್ಚಲು ಚಿತ್ರ

ಆನೆ - ಹುಡುಗ

ಭಾರತದಲ್ಲಿ ಗೋವಧೆ
ಪೂರ್ಣ ನಿಷೇಧವಾಗಲಿ

ಮೈಸೂರು ದಸರಾ ವಸ್ತುಪ್ರದರ್ಶನ
ಮತ್ತು
ಕೈಗಾರಿಕಾ ಮೇಳ 1972

ಸಾಂಸ್ಕೃತಿಕ ಕಾರ್ಯಕ್ರಮ 11-11-1972 ಶನಿವಾರ

ಕಲಾಕ್ಷೇತ್ರ

5-30 ರಿಂದ 7 ಸಂಜೆ	ಶ್ರೀ ಎಸ್. ಹನುಮಂತರಾಜು, ಬೆಂಗಳೂರು	ಸಂಗೀತ
7-00 ರಿಂದ 9-30 ರಾತ್ರಿ	ಭಾಸ್ಕರ ಮಿತ್ರ ಮಂಡಲಿ, ಮೈಸೂರು ನಾಟಕ " ಸಮಾಜ ದ್ರೋಹಿ "	

ಜೀವನರಾಯನ ಕಟ್ಟೆ

6 ರಿಂದ 7 ಸಂಜೆ	ಶ್ರೀಮತಿ ಶಕುಂತಲ, ಮೈಸೂರು	ಸಂಗೀತ
7 ರಿಂದ 8 ರಾತ್ರಿ	ಶ್ರೀ ಗುರುಬಸಪ್ಪ ಮಹಂತಪ್ಪ ಮುಳವಾಡ, ಬಿಜಾಪುರ	ಸಂಗೀತ
8 ರಿಂದ 9-30	ಶ್ರೀ ವಡೆಯರ್ ಸಂಸ್ಥಾಪತಿ ಸ್ವಾಮಿ, ಬಳ್ಳಾರಿ	ಸಂಗೀತ

ಹೆಚ್. ಆರ್. ಗಂಗಣ್ಣ,
ಕಾರ್ಯದರ್ಶಿ, ದಸರಾ ವಸ್ತುಪ್ರದರ್ಶನ ಸಮಿತಿ, ಮೈಸೂರು

ಮೈಸೂರು ದಸರಾ ವಸ್ತುಪ್ರದರ್ಶನ
ಮತ್ತು
ಕೈಗಾರಿಕಾ ಮೇಳ 1972

ಮೈಸೂರು ಸರ್ಕಾರದ ಕಮೀಷನರ್ ಮತ್ತು ರೆವಿನ್ಯೂ ಕಾರ್ಯದರ್ಶಿಯವರಾದ
ಶ್ರೀ ಕೆ. ಬಾಲಸುಬ್ರಹ್ಮಣ್ಯಂ ಐ ಎ ಎಸ್ ರವರು
ಮೈಸೂರು ಜೀವಣರಾಯನ ಕಟ್ಟೆಯ ಮೈದಾನದಲ್ಲಿ
10-11-72 ರ ಶುಕ್ರವಾರ ಸಂಜೆ 6 ಗಂಟೆಗೆ

ಕುಸಿ ಟೂರ್ನಮೆಂಟ್

ಪ್ರಾರಂಭೋತ್ಸವವನ್ನು ನೆರವೇರಿಸಲು ಕೃಪೆಯಿಟ್ಟು ಒಪ್ಪಿರುವರು

ಮೈಸೂರು ವಿಭಾಗಾಧಿಕಾರಿಯವರಾದ
ಶ್ರೀ ಡಿ. ಜೆ. ಬಾಲರಾಜ್, ಐ ಎ ಎಸ್‌ರವರು
ಕೃಪೆಯಿಟ್ಟು ಅಧ್ಯಕ್ಷತೆ ವಹಿಸುವರು
ಸಕಾಲಕ್ಕೆ ಹಾಜರಿರಬೇಕಾಗಿ ಆಹ್ವಾನಿಸಿದೆ

ಅಧ್ಯಕ್ಷರು ಮತ್ತು ಸದಸ್ಯರು
ದಸರಾ ವಸ್ತುಪ್ರದರ್ಶನ ಉಪಸಮಿತಿ
ಮೈಸೂರು

ಸಹಿ.....

Edited Printedand Published by Dharmapracharanirata M S Krishna Rao (Propretor) at the Satvavad Press, Chamarajapuram Mysore